ಶ್ರೀ ಕೆ.ಜಿ ಜಾರ್ಜ್ (ಗೃಹ ಚಚಿವರು)

ಅ) ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಕೊಟ್ಟೂರು ಪೊಲೀಸ್ ಠಾಣೆ ಮತ್ತು ಸಿ.ಪಿ.ಐ ಕಛೇರಿಯ ಕಟ್ಟಡದ ನಿರ್ಮಾಣದ ಕುರಿತು ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಇ) ಹಗರಿಬೊಮ್ಮನಹಳ್ಳಿ ಪೊಲೀಸ್ ಠಾಣೆಯ ಕಟ್ಟಡ ನಿರ್ಮಾಣಕ್ಕೆ ಸ್ವಂತ ಜಾಗ ಲಭ್ಯವಿರುವುದಿಲ್ಲ. ಸ್ಥಳ ಪರಿಶೀಲನೆಯಲ್ಲಿದ್ದು, ಸೂಕ್ತ ಸ್ಥಳ ಲಭ್ಯವಾದ ನಂತರ ಅನುದಾನ ಲಭ್ಯತೆ ಮೇರೆಗೆ ಕಟ್ಟಡ ನಿರ್ಮಾಣದ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ಈ) 2013–14 ನೇ ಸಾಲಿನಲ್ಲಿ ಆರ್ಥಿಕ ವರ್ಷವು ಮುಕ್ತಾಯದ ಹಂತದಲ್ಲಿರುವುದರಿಂದ ಮುಂದಿನ ಆರ್ಥಿಕ ವರ್ಷದಲ್ಲಿ ಕಾರ್ಯಯೋಜನೆ ರೂಪಿಸಲು ಕ್ರಮಕೈಗೊಳ್ಳಲಾಗುವುದು.

ಮೃತಪಟ್ಟ ಜಾನುವಾರಗಳ ಮಾಲೀಕರಿಗೆ ಪರಿಹಾರ

419(322) ಶ್ರೀ ಚಲುವರಾಯಸ್ವಾಮಿ ಎನ್. (ನಾಗಮಂಗಲ)

ಅ) ಮಂಡ್ಯ ಜಿಲ್ಲೆಯಲ್ಲಿ ಕಾಲುಬಾಯಿ ರೋಗದಿಂದ ಮೃತ ಪಟ್ಟ ಜಾನುವಾರಗಳ ಸಂಖ್ಯೆ ಎಷ್ಟು? ಈ ಮೃತ ಪಟ್ಟ ಜಾನುವಾರುಗಳ ಮಾಲೀಕರಾದ ರೈತಾಪಿ ಜನರಿಗೆ ಪರಿಹಾರ ನೀಡಲಾಗಿದೆಯೇ?

ಆ) ಹಾಗಿದ್ದಲ್ಲಿ ಪರಿಹಾರದ ಮೊತ್ತವೆಷ್ಟು? (ತಾಲ್ಲೂಕುವಾರು ವಿವರ ಒದಗಿಸುವುದು)

ಇ) ಈ ರೋಗ ನಿವಾರಣೆಗೆ ಸರ್ಕಾರ ಕೈಗೊಂಡ ಕ್ರಮವೇನು? ಎಷ್ಟು ಜಾನುವಾರುಗಳಿಗೆ ಲಸಿಕೆ ಹಾಕಲಾಗಿದೆ (ತಾಲ್ಲೂಕುವಾರು ವಿವರ ನೀಡುವುದು)

ಈ) ಈ ರೋಗ ಹರಡುವ ಮುನ್ನೆಚ್ಚರಿಕೆಯಿಂದ ಜಾನುವಾರು ಜಾತ್ರೆ ಸಂತೆಗಳನ್ನು ಜಿಲ್ಲೆಯಲ್ಲಿ ರದ್ದುಪಡಿಸಲಾಗಿದೆಯೇ? (ವಿವರ ಒದಗಿಸುವುದು)

ಶ್ರೀ ಟಿ.ಬಿ ಜಯಚಂದ್ರ (ಕಾನೂನು ನ್ಯಾಯ ಮತ್ತು ಮಾನವಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆಹಾಗೂ ಪಶುಸಂಗೋಪನಾ ಸಚಿವರು)

ಅ) ಮಂಡ್ಯ ಜಿಲ್ಲೆಯಲ್ಲಿ ಕಾಲುಬಾಯಿ ರೋಗದಿಂದ ದಿನಾಂಕ 20/12/2013ರ ಅಂತ್ಯಕ್ಕೆ 3388 ಜಾನುವಾರುಗಳು ಮೃತಪಟ್ಟಿರುತ್ತವೆ. ಈವರೆಗೆ ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಮೃತಪಟ್ಟ 89 ಜಾನುವಾರುಗಳ ಸಂಬಂಧ ರೂ 14,35,500/– ಪರಿಹಾರವನ್ನು ಚೆಕ್ ಮೂಲಕ ಜಾನುವಾರು ಮಾಲೀಕರಿಗೆ ವಿತರಿಸಲಾಗಿರುತ್ತದೆ.

ಇನ್ನುಳಿದ ತಾಲ್ಲೂಕುಗಳ ರೈತರಿಗೆ ಪರಿಹಾರ ಇನ್ನೂ ನೀಡಬೇಕಾಗಿರುತ್ತದೆ.

ಆ) ಈವರೆಗೆ ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಮೃತಪಟ್ಟ 89 ಜಾನುವಾರುಗಳು ಸಂಬಂಧ ₹14,35,500/– ಪರಿಹಾರವನ್ನು ಚೆಕ್ ಮೂಲಕ ಜಾನುವಾರು ಮಾಲೀಕರಿಗೆ ವಿತರಿಸಲಾಗಿರುತ್ತದೆ. ನಾಗಮಂಗಲ ತಾಲ್ಲೂಕಿಗೆ ರೂ. 24,20000/– ಮತ್ತು ಪಾಂಡವಪುರ ತಾಲ್ಲೂಕಿಗೆ ರೂ. 59,06,500/– ಗಳನ್ನು ಬಿಡುಗಡೆಗೊಳಿಸಿದ್ದು ರೈತರಿಗೆ ಪಾವತಿ ಮಾಡಬೇಕಾಗಿದೆ. ಉಳಿದಂತೆ ₹4,32,81,500/– ಗಳ ಪರಿಹಾರ ಮೊತ್ತ ಬಿಡುಗಡೆ ಯಾಗಬೇಕಾಗಿರುತ್ತದೆ.

ತಾಲೂಕುವಾರು ವಿವರ ಈ ಕೆಳಕಂಡಂತಿವೆ.

ಕ್ರ. ಸಂ	ತಾಲ್ಲೂಕು	ಪಾವತಿ ಮಾಡಿರುವ ಮೊತ್ತ (₹ಗಳಲ್ಲಿ)	ಈಗ ಬಿಡುಗಡೆ ಮಾಡಿರುವ ಮೊತ್ತ (₹ಗಳಲ್ಲಿ)	ಬಿಡುಗಡೆ ಮಾಡಬೇಕಾಗಿರುವ ಮೊತ್ತ (₹.ಗಳಲ್ಲಿ)
1	ಶ್ರೀ ರಂಗಪಟ್ಟಣ	14,35,500	–	43,86,000
2	ಮಳವಳ್ಳಿ	–	–	55,85,000

3	ಪಾಂಡವಪುರ	–	59,06,500	9,99,500
4	ನಾಗಮಂಗಲ	–	24,02,000	4,88,000
5	ಮಂಡ್ಯ	–	–	75,73,500
6	ಕೆ.ಆರ್. ಪೇಟೆ	–	–	22,28,000
7	ಮದ್ದೂರು	–	–	2,20,21,500
ಒಟ್ಟು		**14,35,500**	**83,08,500**	**4,32,81,500**

ಇ) ಮಂಡ್ಯ ಜಿಲ್ಲೆಗೆ ಸಂಬಂಧಿಸಿದಂತೆ 4,86,432 ಜಾನುವಾರುಗಳಿಗೆ ರೋಗ ನಿಯಂತ್ರಣ ಲಸಿಕೆಯನ್ನು ಹಾಕಲಾಗಿದೆ. ರೋಗೋದ್ರೇಕ ಕಂಡು ಬಂದ ಗ್ರಾಮಗಳಿಗೆ ವಿಶೇಷ ತಂಡಗಳನು ರಚಿಸಿ ಕಳುಹಿಸಿಕೊಟ್ಟು ಚಿಕಿತ್ಸೆ ನೀಡಲಾಗಿದೆ ಹಾಗೂ ಗ್ರಾಮಸ್ಥರಿಗೆ ರೋಗದ ಬಗ್ಗೆ ಅರಿವು ನೀಡಲಾಗಿದೆ. ಚಿಕಿತ್ಸೆಗೆ ಬೇಕಾದ ಅಗತ್ಯ ಔಷಧಿಗಳನ್ನು ಸರಬರಾಜು ಮಾಡಲಾಗಿದೆ. ಲಸಿಕೆ ಹಾಕಲಾದ ತಾಲ್ಲೂಕುವಾರು ಪಟ್ಟಿ ಈ ಕೆಳಕಂಡಂತಿದೆ.

ಕ್ರ ಸಂ	ತಾಲ್ಲೂಕು	ಲಸಿಕೆ ಹಾಕಲಾದ ಜಾನುವಾರಗಳ ಸಂಖ್ಯೆ
1	ಮಂಡ್ಯ	95874
2	ಮದ್ದೂರು	73023
3	ಮಳವಳ್ಳಿ	72110
4	ಶ್ರೀರಂಗಪಟ್ಟಣ	32229
5	ಕೆ,ಆರ್.ಪೇಟೆ	93149
6	ಪಾಂಡವಪುರ	42793
7	ನಾಗಮಂಗಲ	77254
	ಒಟ್ಟು	**486432**

6ನೇ ಸುತ್ತಿನ ಲಸಿಕಾ ಕಾರ್ಯಕ್ರಮವನ್ನು ಜಿಲ್ಲೆಯಾದ್ಯಂತ ದಿನಾಂಕ 15/02/2014 ರಿಂದ ಪ್ರಾರಂಭಿಸಲಾಗುತ್ತಿದೆ. ಇದಕ್ಕೆ ಅಗತ್ಯವಾದ ಲಸಿಕೆಯನ್ನ ಸಹ ಸಂಗ್ರಹಣೆ ಮಾಡಲಾಗಿದೆ.

ಈ) ಮಂಡ್ಯ ಜಿಲ್ಲೆಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಗಳು ಜಿಲ್ಲಾ ವ್ಯಾಪ್ತಿಯ ಪ್ರದೇಶಗಳಲ್ಲಿ ನಡೆಯುವ ಜಾನುವಾರು ಜಾತ್ರೆಗಳನ್ನು ಆದೇಶ ಸಂಖ್ಯೆ ಎಂಎಜಿ(2): 134:2013–14 ದಿನಾಂಕ 20/12/2013ರಲ್ಲಿ ಮುಂದಿನ ಆದೇಶದವರೆಗೆ ತಾತ್ಕಲಿಕವಾಗಿ ರದ್ದುಪಡಿಸಿ ಆದೇಶ ಹೊರಡಿಸಿರುತ್ತಾರೆ.

ಕಾಲುಬಾಯಿ ರೋಗ ಮತ್ತು ಪರಿಹಾರ ನಿಡಿಕೆ

420(670) ಶ್ರೀ ಚಲುವರಾಯಸ್ವಾಮಿ ಎನ್ (ನಾಗಮಂಗಲ)

ಅ) ಮಂಡ್ಯ ಜಿಲ್ಲೆಯಲ್ಲಿ ಕಾಲುಬಾಯಿ ರೋಗದಿಂದ ಮೃತಪಟ್ಟ ಜಾನುವಾರಗಳ ಸಂಖ್ಯೆ ಎಷ್ಟು, ಮೃತಪಟ್ಟ ಜಾನುವಾರಗಳ ಮಾಲೀಕರಾದ ರೈತಾಪಿ ಜನರಿಗೆ ಪರಿಹಾರ ನೀಡಲಾಗಿದಿಯೇ? ಪರಿಹಾರದ ಮೊತ್ತವೇಷ್ಟು, (ತಾಲ್ಲೂಕುವಾರು ವಿವರ ನೀಡುವುದು);

ಆ) ಈ ರೋಗ ನಿವಾರಣೆಗೆ ಕೈಗೊಂಡ ಕ್ರಮಗಳೇನು? ಎಷ್ಟು ಜಾನುವಾರುಗಳಿಗೆ ಲಸಿಕೆ ಹಾಕಲಾಗಿದೆ (ತಾಲ್ಲೂಕುವಾರು ವಿವರ)

ಇ) ಈ ರೋಗ ಜಿಲ್ಲೆಯಲ್ಲಿ ಇನ್ನೂ ಇದ್ದು ಹರಡುವ ಸಂಭವ ಇರುವುದರಿಂದ ಜಾನುವಾರು ಜಾತ್ರೆ ಸಂತೆಗಳನ್ನು ರದ್ದುಪಡಿಸುವ ಬಗ್ಗೆ ಅಧಿಸೂಚನೆ ಹೊರಡಿಸಲಾಗಿದಿಯೇ? (ವಿವರ ನೀಡುವುದು)

ಈ) ಈ ಜಿಲ್ಲೆಯಲ್ಲಿ ಖಾಲಿ ಇರುವ ಪಶುಸಂಗೋಪನಾ ಮತ್ತು ಪಶುಪಾಲನಾ ಇಲಾಖೆಯ ವೈದಕೀಯ/ಅರೆವೈದಕೀಯ ಮತ್ತು ಇತರ ಸಿಬ್ಬಂದಿವರ್ಗದ ಖಾಲಿ ಹುದ್ದೆಗಳ ಸಂಖ್ಯೆ ಎಷ್ಟು?

ಉ) ಈ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?